ಪಿ.ಡಬ್ಲ್ಯೂ –4

ದಿನಾಂಕಃ **17.12.2025** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಶ್ರೀ ಸಿ.ಸಿ.ಎಲ್ ಅರ್ಜಿದಾರರ ಪರ ವಕೀಲರಿಂದ**

ನಾನು ಈ ದಿನ ನ್ಯಾಯಾಲಯಕ್ಕೆ ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಸಲ್ಲಿಸಿದ್ದೇನೆ . ಸದರಿ ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ನಮೂದಿಸಿರುವ ಎಲ್ಲಾ ವಿಷಯಗಳು ಸತ್ಯವಾಗಿವೆ.

**ಪಾಟೀ ಸವಾಲುಃ 2 ನೇ ಎದುರುದಾರ ಪರ ಶ್ರೀ ಹೆಚ್.ಕೆ.ಆರ್ ವಕೀಲರಿಂದ**

ನಾನು ಈ ಅಪಘಾತವನ್ನು ನೋಡಿಲ್ಲ ಎಂದರೆ ಸರಿ. ನಾನು ಅಪಘಾತವನ್ನು ನೋಡಿದ ಕಾರಣ ಹೇಗೆ ಆಯಿತು ಎಂದು ಹೇಳಲು ಬರುವುದಿಲ್ಲ ಎಂದರೆ ಸರಿ. ನನ್ನ ಅಕ್ಕನ ವೈದ್ಯಕೀಯ ವೆಚ್ಚಕ್ಕಾಗಿ 20 ಲಕ್ಷ ಖರ್ಚು ಆಗಿದ್ದು, ಅವರು ದಿನಾಂಕ 6.7.2024 ರಂದು ಮೃತರಾಗಿದ್ದು ಆ ವೈದ್ಯರ ಸಾಕ್ಷಿಯನ್ನು ಮಾಡಿಸಬಹುದು. ಮೃತರನ್ನು ವಿ.ಕೆ. ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದು, ಆ ಆಸ್ಪತ್ರೆಯ ಎಂ.ಎಲ್.ಸಿ. extract ಅನ್ನು ಹಾಜರುಪಡಿಸಬಹುದು. ಮೃತನ್ನು ಬಾಡಿಗೆ ಕಾರಿನಲಿಲ ಕರೆದುಕೊಂಡು ಹೋಗುತ್ತಿದ್ದ ಬಗ್ಗೆ ಮತ್ತು ತಿಥಿ ಕಾರ್ಯಕ್ಕೆ ಖರ್ಚು ಆಗಿರುವ ಬಗ್ಗೆ ದಾಖಲಾತಿಗಳು ಇರುವುದಿಲ್ಲ. ಈ ಅಪಘಾತಕ್ಕೆ ಸಂಬಂಧಿಸಿದಂತೆ ರೇಖಾರವರು ಸತ್ತ ನಂತರ ನಾನು ದೂರನ್ನು ನೀಡಿರುತ್ತೇನೆ. ಮೃತ ರೇಖಾ ನನ್ನ ಅಕ್ಕನಾಗಿರುವುದರಿಂದ ಸಾಕ್ಷಿಯನ್ನು ನೀಡುತ್ತಿದ್ದೇನೆ ಎಂದರೆ ಸರಿ.

**1 ನೇ ಎದುರುದಾರ ಪರ ವಕೀಲರು ಗೈರು ಹಾಜರಾಗಿದ್ದು ಅವರ ಪಾಟೀ ಸವಾಲು ಇಲ್ಲಾ ಎಂದು ತೆಗೆದುಕೊಳ್ಳಲಾಯಿತು.**

**ಪಿ.ಡಬ್ಲ್ಯೂ –4**

ಮರುವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ. ಹೇಳಿ. ಕೇಳಿ.ಸರಿ. ಇದೆ

**6** ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು

ತುಮಕೂರು